## ತುಮಕೂರು ವಿಶ್ವವಿದ್ಯಾನಿಲಯ:

2004ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ಬೇರ್ಪಟ್ಟು, ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿರುವ ತುಮಕೂರು ವಿಶ್ವವಿದ್ಯಾನಿಲಯವು ಮಾದರಿ ವಿಶ್ವವಿದ್ಯಾನಿಲಯವಾಗಿ ಬೆಳೆಯುವ ನಿಟ್ಟಿನಲ್ಲಿ ತನ್ನ ಶೈಕ್ಷಣಿಕ ಜಾಲವನ್ನು ವಿಸ್ತರಿಸಿಕೊಂಡಿದ್ದು, ಹದಿನೆಂಟು ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳಾದ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಹಾಗೂ ವಿಜ್ಞಾನ ಕಾಲೇಜುಗಳನ್ನು ಮುನ್ನಡೆಸುತ್ತಿದೆ. ಉನ್ನತ ಶಿಕ್ಷಣ ಹಾಗೂ ಸಂಶೋಧನೆ ಕುರಿತು ಹಲವಾರು ಮಹತ್ವದ ಕಾರ್ಯಯೋಜನೆಗಳನ್ನು ರೂಪಿಸಿ ಕಾರ್ಯಪ್ರವೃತ್ತವಾಗಿದೆ. ಕರ್ನಾಟಕದ ಸರ್ಕಾರದ ‘ಸಕಾಲ’ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದ ಹಿರಿಮೆಯೊಂದಿಗೆ ಸಿಬಿಸಿಎಸ್ ಪಠ್ಯಕ್ರಮವನ್ನು ಅಳವಡಿಸಿಕೊಂಡಿರುವ ಅಪರೂಪದ ಸಾಧನೆಯನ್ನು ವಿಶ್ವವಿದ್ಯಾನಿಲಯ ಮಾಡಿದೆ. ಬೋಧನೆ, ಸಂಶೋಧನೆ ಹಾಗೂ ವಿಸ್ತರಣಾ ಚಟುವಟಿಕೆಗಳಿಂದ ನಾಡಿನ ಗಮನ ಸೆಳೆದಿರುವ ತುಮಕೂರು ವಿಶ್ವವಿದ್ಯಾನಿಲಯವು ಅಭಿವೃದ್ಧಿ ಪಥದತ್ತ ಮುನ್ನಡೆದಿದೆ.

## ವಿಶ್ವವಿದ್ಯಾನಿಲಯ ಕಲಾ ಕಾಲೇಜು ತುಮಕೂರು:

ತುಮಕೂರು ವಿಶ್ವವಿದ್ಯಾನಿಲಯ ಘಟಕ ಕಾಲೇಜಾಗಿರುವ ವಿಶ್ವವಿದ್ಯಾನಿಲಯ ಕಲಾ ಕಾಲೇಜು ತನ್ನ ಸುದೀರ್ಘ ಇತಿಹಾಸ ಮತ್ತು ಸಾಧನೆಗಳಿಂದ ರಾಜ್ಯದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದೆನಿಸಿದೆ. ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನಿಂದ (ನ್ಯಾಕ್) ‘ಎ’ ಶ್ರೇಣಿಯನ್ನು ಪಡೆದಿರುವುದು ಕಾಲೇಜಿನ ವೈಶಿಷ್ಟ್ಯಪೂರ್ಣ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. 1940ರಲ್ಲಿ ಇಂಟರ್‌ಮೀಡಿಯಟ್ ಕಾಲೇಜಾಗಿ ಆರಂಭಗೊಂಡ ಈ ಸಂಸ್ಥೆ, 1973ರಲ್ಲಿ ಆಡಳಿತಾತ್ಮಕ ಅನುಕೂಲಕ್ಕಾಗಿ ಸರ್ಕಾರಿ ಕಾಲೇಜಿನಿಂದ ವಿಭಜನೆಗೊಂಡು ಸರ್ಕಾರಿ ಕಲಾ ಕಾಲೇಜು ಎಂದು ಹೆಸರು ಪಡೆಯಿತು. 2004ರಲ್ಲಿ ತುಮಕೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ಬಳಿಕ, 2010ರಲ್ಲಿ ಇದು ವಿಶ್ವವಿದ್ಯಾನಿಲಯ ಘಟಕ ಕಾಲೇಜಾಗಿ ಪರಿವರ್ತನೆಗೊಂಡು ‘ವಿಶ್ವವಿದ್ಯಾನಿಲಯ ಕಲಾ ಕಾಲೇಜು’ ಎಂದೇ ಪ್ರಸಿದ್ಧಿ ಪಡೆದಿದೆ.

## ಕನ್ನಡ ವಿಭಾಗ:

ವಿಶ್ವವಿದ್ಯಾನಿಲಯ ಕಲಾ ಕಾಲೇಜಿನ ಕನ್ನಡ ವಿಭಾಗವು 1965ರಲ್ಲಿ ಆರಂಭಗೊಂಡು ಕನ್ನಡ ಸಾಹಿತ್ಯಕ್ಕೆ ಪ್ರಸಿದ್ಧ ಸಾಹಿತಿಗಳನ್ನು ನೀಡಿದ ಹಿರಿಮೆ ತುಮಕೂರಿನದಾಗಿದೆ. ಈ ಪರಂಪರೆಯನ್ನು ಕನ್ನಡ ವಿಭಾಗವು ಮುಂದುವರೆಸಿಕೊಂಡು ಬಂದಿದೆ. ಕನ್ನಡ ವಿಭಾಗದಲ್ಲಿ ಸೇವೆ ಸಲ್ಲಿಸಿರುವ ಮಹನೀಯರಲ್ಲಿ ಜಿ.ಪಿ. ರಾಜರತ್ನಂ, ಸಿ.ಮಹದೇವಪ್ಪ, ಎಂ ಚಿದಾನಂದಮೂರ್ತಿ, ಜಿ.ಎಸ್. ಶಿವರುದ್ರಪ್ಪ, ಹಾ.ಮಾ ನಾಯಕ್, ಸಾ.ಶಿ. ಮರುಳಯ್ಯ, ಅ.ರಾ. ಮಿತ್ರ, ಬರಗೂರು ರಾಮಚಂದ್ರಪ್ಪ, ಜಿ.ಎಸ್.ಸಿದ್ಧಲಿಂಗಯ್ಯ, ಎಚ್.ಜಿ. ಸಣ್ಣಗುಡ್ಡಯ್ಯ, ಎಸ್.ಜಿ. ಸಿದ್ದರಾಮಯ್ಯ, ವಿಜಯಾ ದಬ್ಬೆರಂತಹ ಮಹನೀಯರು ಪ್ರಮುಖರಾಗಿದ್ದಾರೆ. ಕನ್ನಡ ಸಂಶೋಧನೆ, ಕಾರ್ಯಗಾರ, ವಿಚಾರ ಸಂಕಿರಣ, ಸಂವಾದ ಮೊದಲಾದ ಕಾರ್ಯಕ್ರಮಗಳ ಮುಖೇನ ಕನ್ನಡ ವಿಭಾಗವು ನಾಡಿನ ಗಮನ ಸೆಳೆದಿದೆ.

## ವಿಚಾರ ಸಂಕಿರಣದ ಆಶಯ:

ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ವಿಮರ್ಶಾ ಪ್ರಕಾರ ವಿಶಿಷ್ಟವಾದುದು. ಕನ್ನಡ ಸಾಹಿತ್ಯದ ವಿಭಿನ್ನ ಘಟ್ಟಗಳ ತಾತ್ತ್ವಿಕ ಹಿನ್ನೆಲೆಯಲ್ಲಿ ಸುಪುಷ್ಟವಾಗಿ ಬೆಳೆದಿರುವ ಕನ್ನಡ ವಿಮರ್ಶೆಯ ಚರಿತ್ರೆ ಕುತೂಹಲಕರವಾಗಿದೆ. ವಿಮರ್ಶೆಯು ಸಾಹಿತ್ಯ ಮತ್ತು ಓದುಗನನ್ನು ಬೆಸೆಯುವ ಕೊಂಡಿ. ಯಾವುದೇ ಕಾಲದ ಸಾಹಿತ್ಯದ ಗ್ರಹಿಕೆಗೆ ಮತ್ತು ಅನುಸಂಧಾನಕ್ಕೆ ವಿಮರ್ಶೆ ಅತ್ಯಗತ್ಯ. ಕಾಲಕಾಲಕ್ಕೆ ಕನ್ನಡ ವಿಮರ್ಶೆಯ ತಾತ್ವಿಕತೆ ಮತ್ತು ಮಾದರಿಗಳು ಬದಲಾಗುತ್ತಲೇ ಬಂದಿವೆ. ಸಾಹಿತ್ಯವು ಸಮಕಾಲೀನ ಸಮಾಜದ ಕೈಗನ್ನಡಿಯಾದರೆ ವಿಮರ್ಶೆಯು ಸಾಹಿತ್ಯದ ಗುಣದೋಷಗಳನ್ನು ಅಳೆಯುವ ಮಾನದಂಡವಾಗಿದೆ.

ಇಪ್ಪತ್ತೊಂದನೆಯ ಶತಮಾನದ ಎರಡನೇ ದಶಕದ ಕೊನೆಯಲ್ಲಿರುವ ನಾವಿಂದು ನೂರು ವರ್ಷಗಳ ಚರಿತ್ರೆಯನ್ನು ಹೊಂದಿರುವ ಕನ್ನಡ ವಿಮರ್ಶೆಯ ಚಾರಿತ್ರಿಕ ಬೆಳವಣಿಗೆಯ ಪುನರ್‌ಮೌಲ್ಯಾಂಕನದ ಹಂತದಲ್ಲಿದ್ದೇವೆ. ಹಾಗೆಯೇ ನಮ್ಮ ವಿಮರ್ಶಾ ಪ್ರಸ್ಥಾನಗಳ ಪುನರ್‌ಮೌಲ್ಯೀಕರಣ ಆಗಬೇಕಾದುದು ಸಮಕಾಲೀನತೆಯ ಅಗತ್ಯವಾಗಿದೆ. ಕನ್ನಡ ವಿಮರ್ಶಾ ಪರಂಪರೆಯ ಜ್ಞಾನ ಮತ್ತು ಅದರ ಗಂಭೀರ ಚರ್ಚೆಗಳಿಂದು ನಡೆಯಬೇಕಿದೆ. ಈ ದೃಷ್ಟಿಯಿಂದ **ಕನ್ನಡ ವಿಮರ್ಶೆ: ಮರುನೋಟ** ಕುರಿತ ಚಿಂತನ – ಮಂಥನ ಮಹತ್ವ ಪಡೆದುಕೊಳ್ಳುತ್ತದೆ.

ಕನ್ನಡ ವಿಮರ್ಶೆಯ ಪ್ರಮುಖ ಪ್ರಸ್ಥಾನಗಳಾದ ನವೋದಯ ವಿಮರ್ಶೆ, ನವ್ಯ ವಿಮರ್ಶೆ, ದಲಿತ ಬಂಡಾಯ ವಿಮರ್ಶೆ ಹಾಗೂ ಸ್ತ್ರೀವಾದಿ ವಿಮರ್ಶೆಗಳ ಚಾರಿತ್ರಿಕ ಬೆಳವಣಿಗೆ, ಈ ಪ್ರಸ್ಥಾನಗಳ ಪುನರ್‌ಮೌಲ್ಯೀಕರಣ ರಾಷ್ಟ್ರೀಯ ವಿಚಾರ ಸಂಕಿರಣದ ಪ್ರಮುಖ ಆಶಯವಾಗಿದೆ. ಚಾರಿತ್ರಿಕ ಹಿನ್ನೋಟದ ಅರಿವಿಲ್ಲದೆ ಸಮಕಾಲೀನತೆಯನ್ನು ಗ್ರಹಿಸುವುದು ಕಷ್ಟಸಾಧ್ಯ. ಈ ಹಿನ್ನೆಲೆಯಲ್ಲಿ, ಕನ್ನಡ ವಿಮರ್ಶೆಯನ್ನು ಸಮಕಾಲೀನ ಸಾಂಸ್ಕೃತಿಕ ಸಂದರ್ಭದಲ್ಲಿ ಚಿಂತನೆಗೆ ಒಳಗುಮಾಡುವ ಆಶಯವನ್ನು ಹೊಂದಿದೆ.

## ವಿಚಾರ ಸಂಕರಣದಲ್ಲಿ ಮಂಡಿತವಾಗುವ ವಿಷಯಗಳು

- ಕನ್ನಡ ನವೋದಯ ವಿಮರ್ಶೆ
- ಕನ್ನಡ ನವ್ಯ ವಿಮರ್ಶೆ
- ಕನ್ನಡ ದಲಿತ ಬಂಡಾಯ ವಿಮರ್ಶೆ
- ಕನ್ನಡ ಸ್ತ್ರೀವಾದಿ ವಿಮರ್ಶೆ

## ಪ್ರಬಂಧ ಮಂಡಿಸಲು ಆಹ್ವಾನ:

ಮೇಲಿನ ವಿಷಯಗಳನ್ನು ಆಧರಿಸಿದ ಸಂಶೋಧನಾ ಪ್ರಬಂಧಗಳನ್ನು ಆಹ್ವಾನಿಸುತ್ತೇವೆ. ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಪ್ರಬಂಧವನ್ನು ಪೂರ್ಣರೂಪದಲ್ಲಿ (ಒಂದು ಸಾವಿರ ಪದಗಳಿಗೆ ಮೀರದಂತೆ) ಸಲ್ಲಿಸಲು ಕೋರುತ್ತೇವೆ. ಆಯ್ಕೆಯಾದ ಪ್ರಬಂಧವು ನುಡಿ ತಂತ್ರಾಂಶದಲ್ಲಿ, 12 ಫಾಂಟ್ ಅಳತೆ, ಓಣಜು 01 ಜ ಫಾಂಟ್‌ನಲ್ಲಿ ಹಾಗೂ 1.5 ಲೈನ್ ಸ್ಪೇಸಿಂಗ್ನಲ್ಲಿ ಇರಬೇಕು. ಪೂರ್ಣಸ್ವರೂಪದ ಪ್ರಬಂಧವನ್ನು sbelavadi73@gmail.com ಈ ಮಿಂಚಂಚೆಗೆ **ಮಾರ್ಚ್ 10**ರ ಒಳಗಾಗಿ ಸಲ್ಲಿಸಬೇಕು.

## ನೋಂದಾಯಿಸಿಕೊಳ್ಳಲು ಅಂತಿಮ ದಿನಾಂಕ: 10–03–2018

| | |
|---|---|
| ಅಧ್ಯಾಪಕರಿಗೆ | ರೂ.500 |
| ಸಂಶೋಧಕರಿಗೆ | ರೂ.300 |
| ವಿದ್ಯಾರ್ಥಿಗಳಿಗೆ | ರೂ.150 |

**ಡಿಡಿಯನ್ನು: ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿ ವಿ ಇವರ ಹೆಸರಿನಲ್ಲಿ ಸಲ್ಲಿಸಬೇಕು**

**ಹೆಚ್ಚಿನ ಮಾಹಿತಿಗಾಗಿ: 9740439882, 8904464268, 9742218522**

## ಪೋಷಕರು

**ಪ್ರೊ. ಜಯಶೀಲ**
ಕುಲಪತಿಗಳು
ತುಮಕೂರು ವಿಶ್ವವಿದ್ಯಾನಿಲಯ

**ಪ್ರೊ. ಬಿ.ಎಸ್. ಗುಂಜಾಳ**
ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ

## ವಿಚಾರ ಸಂಕಿರಣ ಸಂಘಟನಾ ಸಮಿತಿ

### ಅಧ್ಯಕ್ಷರು

ಶ್ರೀ. ಕೆ.ರಾಮಚಂದ್ರಪ್ಪ
ಪ್ರಾಂಶುಪಾಲರು

### ಸದಸ್ಯರು

ಶ್ರೀ. ಟಿ.ಎನ್. ಹರಿಪ್ರಸಾದ್
ಶ್ರೀ. ಅರ್.ಸಿ. ನಾಗರಾಜ
ಡಾ. ಎಸ್.ನಾಗರಾಜ
ಡಾ. ಗಿರಿಜಾ ಕೆ.ಎಸ್
ಶ್ರೀ.ಪದ್ಮನಾಭ ಕೆ.ವಿ
ಶ್ರೀ. ರಮೇಶ್ ರೆಡ್ಡಿ
ಶ್ರೀ. ಮೋಹನ್ ಪ್ರಕಾಶ್
ಡಾ. ದೇವರಾಜಪ್ಪ.ಎಸ್
ಶ್ರೀ.ಸುದೀಪ್ ಕುಮಾರ್. ಅರ್
ಶ್ರೀಮತಿ. ಸುಮದೇವಿ. ಎಸ್

ಡಾ. ಎಚ್.ಅರ್. ರೇಣುಕ
ಮುಖ್ಯಸ್ಥರು, ಕನ್ನಡ ವಿಭಾಗ

ಶ್ರೀ. ಸಿದ್ದೇಶ. ಡಿ.ಜೆ
ಶ್ರೀ. ಮಲ್ಲಿಕಾರ್ಜುನ. ಎಂ.ಟಿ
ಶ್ರೀ. ಸುರೇಶ. ಟಿ
ಶ್ರೀ. ಮಲ್ಲಿಕಾರ್ಜುನಯ್ಯ
ಶ್ರೀ. ಶ್ರೀನಿವಾಸ. ಎಂ.ಎಸ್
ಶ್ರೀ. ಹನುಮಯ್ಯ. ಎಲ್
ಶ್ರೀ. ಕೃಷ್ಣಮೂರ್ತಿ. ಎನ್
ಶ್ರೀ ಹರೀಶ್ ಡಿ ಆರ್

### ಗೌರವ ಸಂಘಟನಾ ಕಾರ್ಯದರ್ಶಿಗಳು

ಶ್ರೀ. ಬಿ. ಕರಿಯಣ್ಣ
ಶ್ರೀ. ವೆಂಕಟರೆಡ್ಡಿ ರಾಮರೆಡ್ಡಿ

### ಸಂಘಟನಾ ಕಾರ್ಯದರ್ಶಿ

ಡಾ.ಎಸ್. ಶಿವಣ್ಣ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಕಲಾ ಕಾಲೇಜು
ಬಿ.ಎಚ್. ರಸ್ತೆ, ತುಮಕೂರು–572103
ದೂರವಾಣಿ ಸ್ಥಿರ: 0816 2272027 ಸಂಚಾರಿ: 9740439882

# ತುಮಕೂರು ವಿಶ್ವವಿದ್ಯಾನಿಲಯ

# ವಿಶ್ವವಿದ್ಯಾನಿಲಯ ಕಲಾ ಕಾಲೇಜು

ಬಿ.ಎಚ್.ರಸ್ತೆ, ತುಮಕೂರು–572 103
(ನ್ಯಾಕ್‌ನಿಂದ 'ಎ' ಶ್ರೇಣಿಯನ್ನು ಪಡೆದಿದೆ)

ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

# ಕನ್ನಡ ವಿಮರ್ಶೆ: ಮರುನೋಟ

**ದಿನಾಂಕ: ಮಾರ್ಚ್ 13, 2018**

ಸ್ಥಳ: ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣ,
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

### ಆಯೋಜನೆ

ಕನ್ನಡ ವಿಭಾಗ
ವಿಶ್ವವಿದ್ಯಾನಿಲಯ ಕಲಾ ಕಾಲೇಜು
ಬಿ.ಎಚ್. ರಸ್ತೆ, ತುಮಕೂರು–572103